

## ಹೃತಿಕ್ ಮರಳಿ ಗೂಡಿಗೆ

ಹೃತಿಕ್ ರೋಷನ್ ಮನೆಯಿಂದ ಹೊಸ ಸುದ್ದಿ ಬಂದಿದೆ. ಬಲ್ಲ ಮೂಲಗಳ ಪ್ರಕಾರ ಹೃತಿಕ್ ಮತ್ತು ಪರಿತ್ಯಕ್ತ ಪತ್ನಿ ಸುಸೇನ್ ಖಾನ್ ಮತ್ತೆ ಒಂದುಗೂಡಲಿದ್ದಾರೆ. ಇತ್ತೀಚೆಗೆ ಹೃತಿಕ್ ಮತ್ತು ಸುಸೇನ್, ತಮ್ಮ ಇಬ್ಬರು ಮಕ್ಕಳಾದ ಹ್ರೇಹಾನ್ ಮತ್ತು ಹೃಧಾನ್ ಜತೆಗೆ ವಿದೇಶ ಪ್ರವಾಸ ತೆರಳಿದ್ದರು. ಗ್ರೀಸ್ ನಲ್ಲಿ ಇಡೀ ಕುಟುಂಬ ಸಂತೋಷದಿಂದ ಇರುವ ಚಿತ್ರಗಳು ಸಾಮಾಜಿಕ ಮಾಧ್ಯಮಗಳಲ್ಲಿ ರಾರಾಜಿಸುತ್ತಿವೆ.

ಅಂದ ಹಾಗೆ, ಹೃತಿಕ್‌ನ ಇಬ್ಬರು ಮಕ್ಕಳೂ ತಂದೆ–ತಾಯಿ ಮತ್ತೆ ಒಂದುಗೂಡಿ ಸಂಸಾರ ನಡೆಸಬೇಕೆಂದು ಒತ್ತಡ ಹಾಕುತ್ತಿದ್ದಾರಂತೆ. ಬಲ್ಲ ಮೂಲಗಳ ಪ್ರಕಾರ, ಇಬ್ಬರೂ ಸಂಸಾರ ಒಂದುಗೂಡಿಸುವ ಬಗ್ಗೆ ಗಂಭೀರ ಮಾತುಕತೆ ನಡೆಸಿದ್ದಾರಂತೆ. ತಮಗಾಗಿ ಅಲ್ಲವೆಂದರೂ, ಮಕ್ಕಳ ಸಲುವಾಗಿ ಮತ್ತೆ ಒಟ್ಟಿಗೆ ಸಂಸಾರ ನಡೆಸಿ ಎಂದು ಕುಟುಂಬದ ಸದಸ್ಯರೂ ಒತ್ತಡ ಹಾಕಿದ್ದಾರಂತೆ.

## ನಂದಿತಾ ನಿರ್ದೇಶನ



ನಂದಿತಾ ದಾಸ್ ಖುಷಿ ಹಂಚಿಕೊಂಡಿದ್ದಾರೆ. ಅವರ ನಿರ್ದೇಶನದ ಹೊಸ ಚಿತ್ರ 'ಮಾಂಟೊ' ಜಗತ್ತಿನ ವಿವಿಧ ಚಿತ್ರೋತ್ಸವಗಳಿಗೆ ಪ್ರಯಾಣ ಮಾಡುತ್ತಿದೆ. ಹೊಸ ಚಿತ್ರದ ಬಗ್ಗೆ ವಿಮರ್ಶಕರಿಂದ ಸಾಕಷ್ಟು ಮೆಚ್ಚುಗೆಯೂ ವ್ಯಕ್ತವಾಗಿದೆ.

'ಭಯ ಪಡುವ ವಿಷಯವೇ ಇಲ್ಲ. ನನ್ನ ಹೆತ್ತವರು ಬಾಲ್ಯದಿಂದಲೂ ನನ್ನನ್ನು ಭಯ ಪಡದಂತೆ ಬೆಳೆಸಿದ್ದಾರೆ. ಹೊಸ ವಿಚಾರಗಳನ್ನು ಕಲಿತುಕೊಳ್ಳುವುದು ಸಂತೋಷದ ಸಂಗತಿಯೇ' ಎನ್ನುವುದು ನಂದಿತಾ ನುಡಿ. ನನ್ನ ಚಿತ್ರತಂಡ ಸಾಕಷ್ಟು ಸಹಕಾರ ನೀಡಿದೆ, ನನ್ನಿಂದ ಹೊಸತನ್ನು ಬಯಸಿದೆ. ಅದನ್ನು ಪೂರೈಸಿದ ತೃಪ್ತಿ ಇದೆ. ಪ್ರೇಕ್ಷಕರೂ ನನ್ನ ಚಿತ್ರ ಎಂದಾಗ ಹೆಚ್ಚು ನಿರೀಕ್ಷೆ ಇಟ್ಟು ಕೊಳ್ಳುವುದು ಸಹಜವೇ. ಖಂಡಿತಾ ಅವರ ನಿರೀಕ್ಷೆಯನ್ನು ಈಡೇರಿಸಿದ್ದೇನೆ' ಎಂದು ನಂದಿತಾ ಹೇಳಿದ್ದಾರೆ.

ಸೆ.6ರಿಂದ ನಡೆಯಲಿರುವ ಟೊರಾಂಟೊ ಚಿತ್ರೋತ್ಸವದಲ್ಲಿ 'ಮಾಂಟೊ' ಪ್ರದರ್ಶನ ಕಾಣಲಿದೆ. ಹತ್ತು ವರ್ಷಗಳ ಹಿಂದೆ ಇದೇ ಚಿತ್ರೋತ್ಸವಕ್ಕೆ ತನ್ನ ಚೊಚ್ಚಲ ನಿರ್ದೇಶನದ ಚಿತ್ರ 'ಫಿರಾಖ್' ಜತೆಗೆ ಹೋಗಿದ್ದ ನಂದಿತಾ ಸಾಕಷ್ಟು ಚಪ್ಪಾಳೆ ಗಿಟ್ಟಿಸಿದ್ದರು. ಈಗ ಹೊಸ ಚಿತ್ರ ಉರ್ದು ಭಾಷೆಯ ಸಶಕ್ತ ಕಥೆಗಾರ ಸಾದತ್ ಹಸನ್ ಮಂಟೋ ಅವರ ಜೀವನಕಥೆ ಆಧರಿಸಿದೆ. ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳಲ್ಲಿ ಮಾಂಟೊ ಅವರ ಕಥೆಗಳು ಸಾಕಷ್ಟು ಜನಪ್ರಿಯವಾಗಿವೆ.

ಮಾಂಟೊ ಪಾತ್ರಧಾರಿ ನವಾಜುದ್ದೀನ್ ಸಿದ್ದಿಖಿ. ಮಾಂಟೊ ಪತ್ನಿಯ ಪಾತ್ರದಲ್ಲಿ ರಸಿಕಾ ದುಗಾಲ್ ನಟಿಸಿದ್ದಾರೆ. ಚಿತ್ರದಲ್ಲಿ ರಿಶಿ ಕಪೂರ್, ದಿವ್ಯಾ ದತ್ತಾ ಮುಖ್ಯ ಪಾತ್ರಗಳಲ್ಲಿದ್ದಾರೆ.

ಕೆನಡಾದಲ್ಲಿ ಸಾಕಷ್ಟು ಭಾರತೀಯ ಉಪಖಂಡದ ಜನರು ಇರುವುದೂ ನಂದಿತಾರ ಉತ್ಸಾಹ ಹೆಚ್ಚಿಸಿದೆ. 'ಟೊರಾಂಟೋ ಉತ್ಸವದಲ್ಲಿ ನನಗೆ ಜಗತ್ತಿನ ಎಲ್ಲ ಭಾಗದ ಜನರ ಪ್ರತಿಕ್ರಿಯೆಯೂ ಸಿಗಲಿದೆ. ಇಲ್ಲಿನ ಪ್ರೇಕ್ಷಕರು ಕೇನ್ಸ್ ಅಥವಾ ಸಿಡ್ನಿಯ ಪ್ರೇಕ್ಷಕರಿಗಿಂತ ಹೇಗೆ ಭಿನ್ನ ಎನ್ನುವುದೂ ಗೊತ್ತಾಗಲಿದೆ' ಎನ್ನುವುದು ನಂದಿತಾ ಉವಾಚ.

ಮನುಷ್ಯರ ಭಾವನೆಗಳು ಜಗತ್ತಿನ ಎಲ್ಲ ಭಾಗಗಳಲ್ಲೂ ಒಂದೇ ಆಗಿರುತ್ತವೆ. ಮಾಂಟೊ ಜೀವನ ಸ್ಥಳೀಯ ಅನ್ನಿಸಿದರೂ ಈ ಚಿತ್ರದಲ್ಲಿ ನಿರ್ವಹಿಸಿರುವ ವಿಷಯಗಳು ಜಾಗತಿಕವೇ. ನಮ್ಮೊಳಗಿನ ಮಾಂಟೋತನವನ್ನು ಈ ಚಿತ್ರ ಉದ್ದೀಪಿಸಲಿದೆ ಎನ್ನುವುದು ಖಂಡಿತಾ ಎನ್ನುತ್ತಾರೆ ನಂದಿತಾ.

■ ಬಿಂದು